**ಸಿ.ಸಿ.ನಂ.: 3/2024**

ಪಿ.ಡಬ್ಲ್ಯೂ: **3**

(ಇಂದು ದಿನಾಂಕಃ **12-01-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. P.S.N. ವಕೀಲರಿಂದ**

ನಾವು ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಸುಮಾರು 9 ಮುದ್ದತಗಳನ್ನು ಈ ಪ್ರಕರಣವನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಸಮಯವಕಾಶವನ್ನು ಕೇಳಿದ್ದೇವೆ ಎಂದರೆ ಸಾಕ್ಷಿಯು ಆರೋಪಿತನು ಸಾಲವನ್ನು ಮರು ಪಾವತಿ ಮಾಡುತ್ತಾನೆ ಎಂದು ನಮ್ಮ ಬಳಿ ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿತನು ಈ ಮೇಲೆ ಹೇಳಿದ ರೀತಿಯಲ್ಲಿ ನಮ್ಮ ಬಳಿ ಹೇಳಲಿಲ್ಲ ಎಂದರೆ ಸರಿಯಲ್ಲ. ಆರೋಪಿತನಾಗಲೀ ಆರೋಪಿ ಪರ ವಕೀಲರಾಗಲೀ ನ್ಯಾಯಾಲಯದ ಮುಂದೆ ಆರೋಪಿತನು ಸಾಲವನ್ನು ಮರು ಪಾವತಿ ಮಾಡಲು ಬದ್ಧನಿದ್ದಾನೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಈ ಕುರಿತಾಗಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ನಿಪಿ2 ಯಾವ ಕಾರಣಕ್ಕಾಗಿ ನಗದೀಕರಣಗೊಳ್ಳಲಿಲ್ಲ ಎಂಬ ಬಗ್ಗೆ ನೋಡಿ ತಿಳಿದುಕೊಂಡಿರುತ್ತೇನೆ. ನಿಪಿ2 Refer to Drawer ಎಂಬ ಷರಾದೊಂದಿಗೆ ನಗದೀಕರಣಗೊಂಡಿರುವುದಿಲ್ಲ. ನಿಪಿ3 ರಲ್ಲಿರುವ ಕಾರಣ ಬಂದ ನಂತರದಲ್ಲಿ ನಿಪಿ2 ಸಂಬಂಧಿಸಿದ ವ್ಯಕ್ತಿಗೆ ಸಂಪರ್ಕಿಸಿರುವುದಿಲ್ಲ ಹಾಗೂ ಅವರಿಗೆ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದು ಆರೋಪಿತನ ಚೆಕ್ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.2 ರ ಮಾಲೀಕರನ್ನು ಯಾವ ಕಾರಣಕ್ಕಾಗಿ ಸಂಪರ್ಕಿಸಲಿಲ್ಲ ಎಂಬ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸಾಮಾನ್ಯವಾಗಿ ಸಾಲಗಾರರಿಗೆ ಸಾಲ ಮಂಜೂರಾದ ಸಂದರ್ಭದಲ್ಲಿ ಅದನ್ನು ಕೆಡಿಸಿಸಿ ಬ್ಯಾಂಕಿನ ಚೆಕ್ ಮುಖಾಂತರ ನೀಡುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ನಿಪಿ9 ರಲ್ಲಿ ಚೆಕ್ ಮುಖಾಂತರ ಹಣ ಸಂದಾಯ ಆಗಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನಮೂದು ಮಾಡಿರಬಹುದು ಇಲ್ಲದೇ ಇದ್ದಲ್ಲಿ ಎಸ್ ಬಿ ಖಾತೆಯ ಮುಖಾಂತರ ಹಣ ಸಂದಾಯ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಣವು ಚೆಕ್ ಮುಖಾಂತರ ಸಂದಾಯ ಆಗಿರುತ್ತದೆ.

ಕೆಡಿಸಿಸಿ ಬ್ಯಾಂಕಿನ ಮುಖಾಂತರ ಹಣವು ಸಂದಾಯ ಆಗಿದ್ದಲ್ಲಿ ಅದು ನಮ್ಮ ಫಿರ್ಯಾದಿ ಸಂಸ್ದೆಯ ಕೆಡಿಸಿಸಿ ಬ್ಯಾಂಕಿನ ಖಾತಾ ಉತಾರನಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಪ್ರಸ್ತುತ ನಮ್ಮ ಫಿರ್ಯಾದಿ ಸಂಸ್ಥೆಯ ಕೆಡಿಸಿಸಿ ಬ್ಯಾಂಕಿನ ಖಾತಾ ಉತಾರನ್ನು ನಮ್ಮ ಬೇರೆ ಪ್ರಕರಣಗಳಲ್ಲಿ ಹಾಜರುಪಡಿಸುತ್ತಿದ್ದೇವೆ ಎಂದರೆ ಸರಿ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದ್ರಿ ದಾಖಲಾತಿಯು ತಮ್ಮ ಫಿರ್ಯಾದಿ ಸಂಸ್ಥೆಗೆ ಸಂಬಂಧಿಸಿದ ಕೆಡಿಸಿಸಿ ಬ್ಯಾಂಕಿನ ಖಾತೆಯ ಉತಾರ ಆಗಿದ್ದು, ಅದನ್ನು ನಾವು C.C.No.2554/2025 ನಲ್ಲಿ ಹಾಜರುಪಡಿಸಿದ ದಾಖಲಾತಿ ಎಂದರೆ ಸರಿ ಎಂದು ಸಾಕ್ಷಿ ಒಪ್ಪಿಕೊಂಡಿದ್ದು ಅದನ್ನು **ನಿ.ಡಿ.1** ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ಸಾಲವನ್ನು ನೀಡಿದ್ದೇವೆ ಎನ್ನುವ ವಿಷಯವನ್ನು ಪುರಾವೆ ಪಡಿಸಲು ನ್ಯಾಯಾಲಯದ ಮುಂದೆ ನಿಡಿ 1 ರಂತಹ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲಾತಿಗಳ

ಬಗ್ಗೆ ನನಗೆ ಮಾಹಿತಿ ಇದೆ. ಒಂದಾನುವೇಳೆ ನಾನು ನಿಡಿ1 ರಂತಹ ದಾಖಲಾತಿಯನ್ನು ಹಾಜರುಪಡಿಸದೇ ಇದ್ದಲ್ಲಿ ಅದನ್ನು ಮುಂದಿನ ದಿನಾಂಕದಂದು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ಸಾಕ್ಷಿಗೆ ನ್ಯಾಯಾಲಯದ ಮುಂದೆ ನಿಶಾನೀಕರಿಸಿಕೊಂಡ ದಾಖಲಾತಿಗಳನ್ನು ತೋರಿಸಲಾಗಿ ನಿಡಿ1 ರಂತಹ ದಾಖಲಾತಿಗಳು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾವು ಆರೋಪಿತನಿಗೆ ಯಾವುದೇ ಸಾಲವನ್ನು ನೀಡದೇ ಇದ್ದ ಕಾರಣದಿಂದಾಗಿ ನಿಡಿ1 ರಂತಹ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಫಿರ್ಯಾಯಲ್ಲಿ ಕಳೇದ ಒಂದು ವರ್ಷದಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಫಿರ್ಯಾದಿ ಸಂಸ್ದೆಯಲ್ಲಿ ಒಟ್ಟೂ 4 ಶಾಖೆಗಳು ಇವೆ. ನಾನು ಕುಮಟಾ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣದ ಸಾಲದ ಎಲ್ಲ ವ್ಯವಹಾರಗಳು ಗೋಕರ್ಣ ಶಾಖೆಯಲ್ಲಿ ನಡೆದಿರುತ್ತದೆ. ನಿಮ್ಮ ಪ್ರಕಾರ ನಾವು ಹಾಜರುಪಡಿಸಿದ ದಾಖಲಾತಿಗಳ ಪ್ರಕಾರ ಈ ಪ್ರಕರಣದ ಸಾಲದ ವ್ಯವಹಾರವು ನಾನು ಫಿರ್ಯಾದಿ ಸಂಸ್ಥೆಯನ್ನು ಸೇರುವ ಪೂರ್ವದಲ್ಲಿ ಆಗಿರುತ್ತದೆ ಎಂದರೆ ಸರಿ. ಅದೇ ರೀತಿಯಾಗಿ ಈ ಪ್ರಕರಣವನ್ನು ಸಹ ನಾವು ಫಿರ್ಯದಿ ಸಂಸ್ಥೆಗೆ ಸೇರುವ ಪೂರ್ವದಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಆದ್ದರಿಂದ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿಗಳು ನನ್ನ ಮುಂದೆ ಆಗಿರುವುದಿಲ್ಲ ಎಂದರೆ ಸರಿ. ಗೋಕರ್ಣ ಶಾಖೆಗೆ ಸಂಬಂಧಿಸಿದಂತೆ ಬೇರೆ ಶಾಖಾ ವ್ಯವಸ್ಥಾಪಕರು ಹಾಗೂ ಲೆಕ್ಕಿಗಳು ಇದ್ದಾರೆ ಎಂದರೆ ಸರಿ.

ನಿಪಿ2 ನ್ನು ನನ್ನ ಮುಂದೆ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಿಪಿ2 ನ್ನು ನೀಡಿರುವ ಕುರಿತಾಗಿ ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ2 ರ ಬರವಣಿಗೆಯು ನನ್ನ ಮುಂದೆ ಆಗಿರುವುದಿಲ್ಲ ಎಂದರೆ ಸರಿ. ಆದ್ದರಿಂದ ನಿಪಿ 2 ರಲ್ಲಿನ ಬರವಣಿಗೆಯು ಯಾರು ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಮ್ಮ ಫಿರ್ಯಾದಿ ಸಂಸ್ಥೆಯಿಂದ ದಾಖಲಿಸುವ ಎಲ್ಲ ಪ್ರಕರಣಗಳಲ್ಲಿ ನಿಪಿ 2 ರಲ್ಲಿನ ಸಹಿ ಎನ್ನುವ ಕಲಂನ ಕೆಳಗಡೆ ಸದ್ರಿ ನಿಪಿ2 ಯಾರಿಗೆ ಸಂಬಂಧಿಸಿದೆ ಎಂಬ ಬಗ್ಗೆ ಅವರ ಹೆಸರನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಲವನ್ನು ನೀಡುವ ಸಂದರ್ಭದಲ್ಲಿ ನಿಪಿ2 ನ್ನು ನಾವು ಭದ್ರತೆಗಾಗಿ ಪಡೆದುಕೊಳ್ಳುವುದರಿಂದ ಈ ರೀತಿಯಾಗಿ ಬರವಣಿಗೆ ಮಾಡುತ್ತೇವೆ ಎಂದರೆ ಸರಿಯಲ್ಲ.

C.C.No.191/2022, C.C.No.197/2022 ಹಾಗೂ C.C.No.1347/2022 ಹಾಗೂ C.C.No.225/2022 ರಲ್ಲಿ ಫಿರ್ಯಾದಿ ಸಂಸ್ಥೆಯನ್ನು ನಾನೇ ಪ್ರತಿನಿಧಿಸುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಸದ್ರಿ ಪ್ರಕರಣಗಳಲ್ಲಿ ಹಾಜರುಪಡಿಸಿದ ಚೆಕ್‌ಗಳ ಧೃಡೀಕೃತ ಪ್ರತಿಗಳನ್ನು ತೋರಿಸಲಾಗಿ ಅವುಗಳು ಸದ್ರಿ ಪ್ರಕರಣಕ್ಕೆ ಸಂಭಂಧಿಸಿದ ದಾಖಲಾತಿಗಳು ಎಂದರೆ ಸರಿ. ಸದ್ರಿ ದಾಖಲಾತಿಗಳಲ್ಲಿ ನಾವು ಚೆಕ್ ಯಾರಿಗೆ ಸಂಬಂಧಿಸಿದೆ ಎಂಬ ಬಗ್ಗೆ ಬರವಣಿಗೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಮೇಲೆ ತೋರಿಸಿದ ಎಲ್ಲ ದಾಖಲಾತಿಗಳಲ್ಲಿ ಈ ಕುರಿತಾಗಿ ಕಾಣುತ್ತದೆ ಎಂದರೆ ಸರಿ. ಸಾಕ್ಷಿಯು ಸದ್ರಿ ದಾಖಲಾತಿಗಳನ್ನು ಒಪ್ಪಿಕೊಂಡ ಆಧಾರದ ಮೇರೆಗೆ ಅವುಗಳನ್ನು ಒಟ್ಟಾಗಿ **ನಿ.ಡಿ.2** ಎಂದು ಗುರುತಿಸಲಾಯಿತು.

**ಸಿ.ಸಿ.ನಂ.: 3/2024**

**ಪಿ.ಡಬ್ಲ್ಯೂ: 3**

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ